ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, dated 27th July 1972, (Sravana, 5 1894 S.E.)

The House met in the Assembly Chamber, Vidhana Soudha, at One of the Clock.

MADAM SPEAKER [SMT. K.S. NAGARATHNAMMA] in the Chair.

STARRED QUESTIONS

(to which oral answers were given)

DR. SAMUEL MATHAI'S REPORT ON BANGALORE UNIVERSITY

328.—SRI T.R. SHAMANNA (Fort).—

Will the Minister for Education be pleased to state ; —

(*a*) whether the Government have received the report submitted by Dr. Samuel Mathai to the Chancellor in April 1972 in regard to the affairs of the Bangalore University ;

(*b*) if so, whether the Government have taken any decisions on the findings of the said report ?

SRI A.R. BADRINARAYAN —Minister for Education

(*a*) Yes

(*b*) The report is under examination.

SRI T.R. SHAMANNA : In view of the fact that the affairs of the Bangalore University are far from satisfactory and to safeguard the interests of students' education, will the Hon Minister take suitable steps to tone up the administration of the University ?

†SRI A.R. BADRINARAYAN: I don't admit it is far from satisfactory. There are some complaints, we will have them examined.

SRI T.R. SHAMANNA: There is a huge complaint among the students that the results are not announced in time and marks card are not supplied to them in time. Will the Hon. Minister look into this ?

SRI A.R. BADRINARAYAN: This question refers to the report of Mr. Mathai.

ಶ್ರೀ ಕೋಣಂದೂರು ಲಿಂಗಪ್ಪ : ಈ ಮಥಾಯಿ ವರದಿ ಬಂದಾಗಿನಿಂದ ಈ ವರೆಗೆ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುತ್ತಾ ಇದ್ದಾರೆ. ಅದರ ಬಗ್ಗೆ ಒಂದು ನಿರ್ಧಾರವನ್ನು ಯಾವಾಗ ಕೈಗೊಳ್ಳುತ್ತೀರಿ ? ಹಾಗೆಯೇ ಬೆಂಗಳೂರು ಯೂನಿವರ್ಸಿಟಿಯ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕ ವರ್ಗದವರಿಗೆ ಆನೇಕ ಕಿರುಕುಳ ಮತ್ತು ಅನ್ಯಾಯಗಳು ಆಗುತ್ತಿರುವುದನ್ನು ತಪ್ಪಿಸುವುದಕ್ಕೆ ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ? ಉದಾಹರಣೆಗೆ ಕನ್ನಡ ಮಾಧ್ಯಮದ ವಿಚಾರದಲ್ಲಿ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ.ಆರ್. ಬದರಿನಾರಾಯಣ : ಮಥಾಯಿ ರಿಪೋರ್ಟು ಬಹಳ ಇಲಾಬೊರೇಟ್ ಆಗಿದೆ. ಅದು ಗಹನವಾದಂತಹ ರಿಪೋರ್ಟಾಗಿದೆ. ಅದನ್ನು ವಿಶೇಷವಾದ ಗಮನ ಕೊಟ್ಟು ನೋಡಬೇಕಾಗಿದೆ. ಆದ್ದರಿಂದ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದೆ. ಇನ್ನು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಬಗ್ಗೆ ನಾನು ವೈಸ್‌ಚಾನ್ಸಲರೊಡನೆ ಮಾತನಾಡಿದ್ದೇನೆ. ಅದಕ್ಕೆ ಪರಿಹಾರ ಒಂದನ್ನು ಕಂಡುಹಿಡಿಯುತ್ತೇನೆಂದು ಅವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ ; ಈ ರಿಪೋರ್ಟು ಏಪ್ರಿಲ್‌ನಲ್ಲಿ ಬಂದಿದೆ. ಇನ್ನೂ ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದ್ದರಿಂದ ಅದರ ಬಗ್ಗೆ ಯಾವಾಗ ಖಚಿತವಾಗಿ ಒಂದು ಉತ್ತರ ಹೇಳುತ್ತೀರಿ ?

ಅಧ್ಯಕ್ಷರು : ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ ; ನನಗೆ ತಿಳಿದಿರುವ ಮಟ್ಟಿಗೆ ಈ ರಿಪೋರ್ಟಿನಲ್ಲಿ ರಾಜಕೀಯ ಬಣ್ಣ ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎ.ಆರ್. ಬದರಿನಾರಾಯಣ : ರಾಜಕೀಯ ಬಣ್ಣಬೆಂಬುದು ಯಾವ ಕ್ಷೇತ್ರದಲ್ಲಿಯೂ ಇಲ್ಲದೆ ಇಲ್ಲ. ಹಾಗೆ ಒಂದು ವೇಳೆ ಅದರಲ್ಲಿ ಇದ್ದರೆ ಅದಕ್ಕೆ ಅವಕಾಶ ಇಲ್ಲದಂದೆ ನೋಡಿಕೊಳ್ಳುತ್ತೇವೆ.

SRI D. B. KALMANKAR: May I know what are the important recommendations made by Dr. Mathai ?

SRI A. R BADRINARAYAN: The recommendations are very elaborate.

SRI D. B. KALMANKAR: I want you to give salient features of the recommendations.

SRI H. D. DEVEGOWDA: If possible a copy of the said report could be made available to the Members-

SRI A. R BADRINARAYAN: Yes. I have no objection to make available a copy of the said report to the Hon. Members.

---

†Asterieksindi cate that remarks or speeches have not been revised by the member Concerned.